# Review of Goldmedal Hoopla fan

## Coverage: **Udayavani**

*Date : 12 Nov 2021*

https://bit.ly/3HAh2hf

## ಜಿಎಂ ನಿಂದ ಅಲಂಕಾರಿಕ ಶ್ರೇಣಿಯ ಹೂಪ್ಲಾ ಫ್ಯಾನ್: ಏನಿದರ ವೈಶಿಷ್ಟ್ಯತೆ?

ಅ ಅ ಅ

TEAM UDAYAVANI, NOV 11, 2021, 4:25 PM IST



ವಿದ್ಯುತ್ ಸ್ವಿಚ್ ಗಳು, ವಿದ್ಯುತ್ ವೈರ್ ಮತ್ತಿತರ ವಿದ್ಯುತ್ ಉಪಕರಣಗಳ ಬ್ರಾಂಡ್ ಆದ ಗೋಲ್ಡ್ ಮೆಡಲ್ ಎಲೆಕ್ಟ್ರಿಕಲ್ಸ್ (ಜಿಎಂ) ಸೀಲಿಂಗ್ ಫ್ಯಾನ್ ಗಳ ಮಾರುಕಟ್ಟೆಯಲ್ಲೂ ತನ್ನ ಅಸ್ತಿತ್ವ ಪ್ರದರ್ಶಿಸಿದೆ. ಈಗಾಗಲೇ ಜಿಎಂ ಏರ್ 9 ಪ್ಲಸ್, ಬ್ರೀಜ್, ಎಕ್ಸೆಲ್, ಲಿವ್ರೋ, ನೆಕ್ಸಾ, ಸ್ಪೆನ್ಸರ್, ಮಾಡುಲರ್ ಫೆರ್ರಿಯೋ ಮತ್ತಿತರ ಫ್ಯಾನ್ ಗಳನ್ನು ಹೊರತಂದಿದೆ. ಇತ್ತೀಚಿಗೆ ಅದು ಹೂಪ್ಲಾ ಎಂಬ ಅಲಂಕಾರಿಕ ಮಾದರಿಯ ಫ್ಯಾನ್ ಗಳನ್ನು ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರದ ಆತ್ಮನಿರ್ಭರ್ ಭಾರತ್ ಪರಿಕಲ್ಪನೆಯಡಿ, ಭಾರತೀಯ ಕಂಪೆನಿಯಾದ ಜಿಎಂ ಸಂಪೂರ್ಣ ಸ್ವದೇಶಿ ಬಿಡಿಭಾಗಗಳನ್ನು ಬಳಸಿ ಫ್ಯಾನ್ ಗಳನ್ನು ತಯಾರಿಸುತ್ತಿದೆ.

3 ಬ್ಲೇಡ್ ಗಳ ಈ ಹೂಪ್ಲಾ ಫ್ಯಾನ್ 1200 ಎಂಎಂ ಅಳತೆಯ ಬ್ಲೇಡ್ ಗಳನ್ನು ಹೊಂದಿದೆ. ಈ ಬ್ಲೇಡ್ ಗಳು ಮತ್ತು ಬಾಡಿ ಹೈಗ್ರೇಡ್ ಅಲ್ಯುಮೀನಿಯಂ ನಿಂದ ತಯಾರಾಗಿದೆ. ಫ್ಯಾನಿನ ಬ್ಲೇಡ್ ಮತ್ತು ಬಾಡಿಯನ್ನು ಧೂಳು ಅಂಟದಂತೆ ವಿನ್ಯಾಸ ಮಾಡಲಾಗಿದೆ. ಫ್ಯಾನಿನ ವಿನ್ಯಾಸ ಗಮನ ಸೆಳೆಯುತ್ತದೆ.

**ಇದನ್ನೂ ಓದಿ:ಎಚ್ಚರಿಕೆ...ಕೋವಿಡ್ 19 ಸೋಂಕು ಇನ್ನೂ ಅಂತ್ಯಗೊಂಡಿಲ್ಲ: ರಾಜ್ಯಗಳಿಗೆ ಕೇಂದ್ರದ ಸೂಚನೆ**